ಶ್ರೀ ಡಿ.ವಿ. ಸದಾನಂದಗೌಡ:- ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಮಂತ್ರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ಮಂತ್ರಿಗಳು ನಾನೇ ಸ್ವತಃ ಬಂದು, ಅಲ್ಲಿ ಪರಿಶೀಲನೆ ಮಾಡಿ, ಮಕ್ಕಳು ಇದ್ದರೆ ಮತ್ತೆ ಕೊಡುತ್ತೇನೆ ಎಂದು ಹೇಳುವಂತಾದ್ದೂ ನಿಜವಾಗಿಯೂ ಕೂಡ ತುಂಬಾ ಸಂತೋಷದ ಸಂಗತಿ. ಆದಷ್ಟು ಶೀಘ್ರವಾಗಿ ಮಾನ್ಯ ಮಂತ್ರಿಗಳು ಅಧಿವೇಶನ ಮುಗಿದ ತಕ್ಷಣ ಅಲ್ಲಿಗೆ ಭೇಟಿ ನೀಡಬೇಕು, ಎಂದು ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀಮತಿ ಮೋಟಮ್ಮ:- ಮಾನ್ಯ ಸದಾನಂದಗೌಡರೂ ಸಹಾ ಬರಬೇಕು. ನಾವು ಮತ್ತು ನೀವು ಇಬ್ಬರೂ ಅಲ್ಲಿಗೆ ಸರ್‌ಪ್ರೈಸ್ ವಿಸಿಟ್ ಕೊಡಬೇಕು. ಅಲ್ಲಿ ಮಕ್ಕಳು ಇದ್ದರೆ ಮಾತ್ರ ನಾನು ಅದನ್ನು ಮಾಡಿಕೊಡುತ್ತೇನೆ.

ಶ್ರೀ ಡಿ.ವಿ.ಸದಾನಂದಗೌಡ:- ನಾನೂ ಕೂಡ ಖಂಡಿತವಾಗಿ ಮಾನ್ಯ ಮಂತ್ರಿಗಳ ಜೊತೆಗೆ ಬರುತ್ತೇನೆ. ಮಾನ್ಯ ಮಂತ್ರಿಗಳಿಗೆ ಈ ರೀತಿಯ ಮನಸ್ಸು ಇರುವುದು ನೋಡಿ ನನಗೆ ಬಹಳ ಸಂತೋಷವಾಯಿತು. ನಿಮ್ಮ ಜೊತೆಯಲ್ಲೇ ನೀವು ಕರೆದಲ್ಲಿಗೆ ನಾನು ಬರುತ್ತೇನೆ. ನಾವು ಅಲ್ಲಿ ವೀಕ್ಷಣೆ ಮಾಡಿ, ಅಂತಹದ್ದೇನಾದರೂ ಇದ್ದರೆ ಮತ್ತೆ ಅವರನ್ನು ಅಲ್ಲಿಗೆ ಹಾಕಿಸಿಕೊಡುವ ಕೆಲಸ ಮಾಡೋಣ.

(ಇ) ತರೀಕೆರೆ ತಾಲ್ಲೂಕು ರಾಷ್ಟ್ರೀಯ ಹೆದ್ದಾರಿಯಲ್ಲಿ 206ನೇ ರಸ್ತೆ ಕಾಮಗಾರಿ ಕೈಗೊಳ್ಳುವುದು.

ಶ್ರೀ ಬಿ.ಆರ್.ನೀಲಕಂಠಪ್ಪ (ತರೀಕೆರೆ):- ಮಾನ್ಯ ಅಧ್ಯಕ್ಷರೇ, ನಾನು ಸನ್ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆಯುತ್ತಿದ್ದೇನೆ. ತರೀಕೆರೆ ತಾಲ್ಲೂಕು ರಾಷ್ಟ್ರೀಯ ಹೆದ್ದಾರಿಯಲ್ಲಿನ 206ನೇ ರಸ್ತೆ ಸುಮಾರು 2 ಕೋಟಿ 10 ಲಕ್ಷ ರೂಪಾಯಿಗಳಲ್ಲಿ ಕಾಮಗಾರಿಯಾಗಿದೆ. 163ರಿದಂ 178ರವರೆಗಿನ 15 ಕಿ.ಮೀ.ಗಳ ರಸ್ತೆಯನ್ನು ಡಾಂಬರೀಕರಣ ಮಾಡಿದ್ದಾರೆ. ಈ ಡಾಂಬರೀಕರಣ ಜನವರಿ ತಿಂಗಳಿನಿಂದ ಪ್ರಾರಂಭವಾಗಿದೆ. ಅಲ್ಲಿಂದ ಇಲ್ಲಿಯವರೆಗೆ ಆ ಅಧಿಕಾರಿಗಳಿಗೆ ಹೇಳಿದ್ದೇನೆ. ಆ ಕಾಂಟ್ರಾಕ್ಟರ್‌ಗೆ ಹೇಳಿದ್ದೇನೆ, ಅಲ್ಲಿ ರಸ್ತೆ ಸಂಪೂರ್ಣವಾಗಿ ಹಾಳಾಗಿದೆ. ಅದನ್ನು ಜಿಲ್ಲಾ ಉಸ್ತುವಾರಿ ಸಚಿವರೂ ಸಹ ನೋಡಿದ್ದಾರೆ. ಮಾನ್ಯ ಸಚಿವರೂ ಕೂಡ ಅಲ್ಲಿಗೆ ಬಂದಿದ್ದಾರೆ. ಅದನ್ನು ಎಲ್ಲರೂ ನೋಡಿದ್ದಾರೆ. ಇವತ್ತು ಏನಾದರೂ ಆಕಸ್ಮಿಕವಾಗಿ ಅಲ್ಲಿ ಮಳೆ ಬಂದಿದ್ದರೆ ಅದು ಸಂಪೂರ್ಣವಾಗಿ ಹಾಳಾಗುತ್ತಿತ್ತು. ತಾವು ಏನು ಈ ವರದಿ ಕೊಟ್ಟಿದ್ದೀರಿ, ಇದು ಸಂಪೂರ್ಣ ಸುಳ್ಳಾಗಿದೆ. ನಾನು ಹೇಳುತ್ತಿದ್ದೇನೆ, ದಯಮಾಡಿ ಇದನ್ನು ತಾವು ಅಧಿಕಾರಿಗಳು ಕೊಟ್ಟಂತಹ ವರದಿಯನ್ನು ಸಂಪೂರ್ಣವಾಗಿ ನಂಬಬೇಡಿ. ಏಕೆಂದರೆ, ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ, ತಾವು ಸದನದಿಂದ ಯಾರನ್ನಾದರೂ ಕಳುಹಿಸಿ. ವಿರೋಧ ಪಕ್ಷ, ರೂಲಿಂಗ್ ಪಾರ್ಟಿ ಸದಸ್ಯರು, ಎಲ್ಲರನ್ನೂ ಕಳುಹಿಸಿ, ತನಿಖೆ ಮಾಡಿ, ಅದು ಏನು ಸತ್ಯ ಇದೆ ಎಂಬುದು ತಿಳಿಯುತ್ತದೆ ಅಧಿಕಾರಿಗಳು ಹೇಳಿದ್ದೇ ಸತ್ಯ ಆಗುವುದಾದರೆ, ನಾನು ಈ ಸದನಕ್ಕೆ ಮೊದಲು ರಾಜೀನಾಮೆ ಕೊಡುತ್ತೇನೆ. ಅಧಿಕಾರಿಗಳು ಸುಳ್ಳು ವರದಿಯನ್ನು ನಿಮಗೆ ಕೊಟ್ಟಿದ್ದಾರೆ. ನಾನು ಸತತವಾಗಿ ನಾಲ್ಕು ತಿಂಗಳಿನಿಂದ ಆ ರಸ್ತೆಯಲ್ಲಿ ಪ್ರತಿ ನಿತ್ಯ ಓಡಾಡುತ್ತಿದ್ದೇನೆ. ಇವತ್ತು ಬರಗಾಲದಿಂದಾಗಿ ಅಲ್ಲಿ ಮಳೆ ಇಲ್ಲದೇ ಇದ್ದರೂ ಸಹಿತ ಆ ರಸ್ತೆಯಲ್ಲಿ ಸಂಪೂರ್ಣವಾಗಿ ಗುಂಡಿಗಳಿಂದ ತುಂಬಿದೆ. ಮಾನ್ಯ ಸಚಿವರು ಕೇವಲ 3 ಕಿ.ಮೀ. ರಸ್ತೆ ಮಾತ್ರ ಹಾಳಾಗಿದೆ ಎಂದು ವಿಧಾನ ಪರಿಷತ್ತಿನಲ್ಲಿ ಹೇಳಿದ್ದೀರಿ. ಅಲ್ಲಿ ಕೇವಲ 3 ಕಿ.ಮೀ. ಅಷ್ಟೇ ಅಲ್ಲ, 15 ಕಿ.ಮೀ.ನಲ್ಲಿ 2 ಕಿ.ಮೀ ಮಾತ್ರ ರಸ್ತೆ ಇದೆ. ಅದು ಮಣ್ಣಿನ ಮೇಲೆ ಮಾಡಿರತಕ್ಕಂಥ ರಸ್ತೆ

ಆಗಿದೆಯೇ ಹೊರತು ಬೇರೇನೂ ಅಲ್ಲಿ ಇಲ್ಲವೇ ಇಲ್ಲ. ದಯಮಾಡಿ ಮಾನ್ಯ ಸಚಿವರು ಅಲ್ಲಿನ ಅಧಿಕಾರಿಗಳನ್ನು ಅಮಾನತ್ತು ಮಾಡಬೇಕೆಂದು ನಾನು ಹೇಳುತ್ತಿದ್ದೇನೆ. ನಾನು ಮಾಡತಕ್ಕ ಆಪಾದನೆ ಏನಾದರೂ ಸುಳ್ಳಾದರೆ ನಾನು ಎಂ.ಎಲ್.ಎ. ಸ್ಥಾನಕ್ಕೆ ರಾಜೀನಾಮೆ ಕೊಡಬೇಕೆಂದು, ಅದನ್ನು ಬರೆದುಕೊಂಡು ಇಲ್ಲಿ ಬಂದಿದ್ದೇನೆ. ಅಧಿಕಾರಿಗಳು ಕೊಟ್ಟಿರತಕ್ಕಂಥ ವರದಿ ಸುಳ್ಳಾದರೆ, ಅಧಿಕಾರಿಗಳನ್ನು ಕೇವಲ ಸಸ್ಪೆಂಡ್ ಮಾಡಬೇಡಿ, ಅಧಿಕಾರಿಗಳನ್ನು ಶಾಶ್ವತವಾಗಿ ಸೇವೆಯಿಂದ ಮುಕ್ತಗೊಳಿಸಿದರೆ ಮಾತ್ರ ಶಾಸಕರು ಮಾಡಿರತಕ್ಕಂಥ ಆಪಾದನೆ ಸತ್ಯವಾಗುತ್ತದೆ. ಏಕೆಂದರೆ, ಈ ಸದನಕ್ಕೆ ನಾನು ಪದೇ ಪದೇ ಸುಳ್ಳು ಹೇಳಲಿಕ್ಕೆ ತಯಾರಿಲ್ಲ. ಇದು ರಾಷ್ಟ್ರೀಯ ಹೆದ್ದಾರಿಯಾಗಿರುವುದರಿಂದ, ನಾನು ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ದೂರು ಸಲ್ಲಿಸಿದ್ದೇನೆ. ಈ ಬಗ್ಗೆ ಕೇಂದ್ರ ಸಚಿವರೊಡನೆ ಸಂಪರ್ಕ ಮಾಡಿದ್ದೇನೆ. ಕೇಂದ್ರ ಸಚಿವರ ಆಪ್ತ ವಲಯದಲ್ಲಿಯೂ ಸಹಾ ನಾನು ಸಂಪರ್ಕ ಮಾಡಿದ್ದೇನೆ. ನೀವು ಸಹಾ ನಾಲ್ಕು ಸಲ ಫೋನ್ ಮಾಡಿ ರಸ್ತೆ ಸರಿ ಮಾಡಿ ಎಂದು ಹೇಳಿದ್ದೀರಿ. ಇದನ್ನೆಲ್ಲವನ್ನೂ ಗಣನೆಗೆ ತೆಗೆದುಕೊಳ್ಳದೆ ಅಧಿಕಾರಿಗಳು ಇಗ್‌ನೋರ್ ಮಾಡಿದ್ದಾರೆ. ದಯಮಾಡಿ, ಅಂತಿಮವಾಗಿ ಇದಕ್ಕೆ ಪರಿಹಾರ ಒದಗಿಸಿ. ಒಂದು ವರ್ಷದಿಂದ ರಿಪೇರಿ ಮಾಡಿಸುತ್ತೇನೆ ಎಂದು ಹೇಳುತ್ತಿದ್ದಾರೆ. ಅದು ಸುಳ್ಳು. ಈಗಲೇ ಮಾಡದಿದ್ದುದ್ದನ್ನು ಅವನು ಮುಂದೆ ಏನು ಮಾಡುತ್ತಾನೆ? 2 ಕೋಟಿ ರೂಪಾಯಿಗಳಲ್ಲಿ 10-15 ಲಕ್ಷ ರೂಪಾಯಿಗಳ ಇ.ಎಂ.ಡಿ. ಮಾತ್ರ ನೀವು ಹಿಡಿದುಕೊಂಡಿದ್ದೀರಿ. ಬೇರೆಯದೆಲ್ಲಾ ಇದೆ. ಅವನನ್ನು ಹೇಗೆ ಹಿಡಿದುಕೊಂಡು ಬರುತ್ತೀರಿ? ಎನ್‌ಹೆಚ್ - 4 ಬಾಂಬೆಯಲ್ಲಿ ಇರತಕ್ಕಂಥಾದ್ದನ್ನು ಕ್ಲೋಸ್ ಮಾಡಲಿಕ್ಕಾಗುವುದಿಲ್ಲ. ನಾನು ಅಧಿಕಾರಿಗಳಿಗೆ ಎಷ್ಟೋ ಸಲ ಹೇಳಿದ್ದೇನೆ. ನೀವು ಹೇಳಿದ್ದೀರಿ, ನಾನು ಹೇಳಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ರಾಷ್ಟ್ರೀಯ ಹೆದ್ದಾರಿಯ ಕೇಂದ್ರ ಸಚಿವರು ಹೇಳಿದ್ದಾರೆ. ಆದರೂ ಸಹಾ ನಮ್ಮನ್ನೆಲ್ಲಾ ನೆಗ್‌ಲೆಕ್ಟ್ ಮಾಡಿದ್ದಾರೆ. ಇದೆಂತಹ ವಾತಾವರಣ? ಇದಕ್ಕೆ ಒಂದು ನಿರ್ದಿಷ್ಟವಾದಂತಹ ಆಪಾದನೆಯನ್ನು ನಾನು ಮಾಡುತ್ತಿದ್ದೇನೆ. ಇದು ಸುಳ್ಳಾದರೆ ನಾನು ರಾಜೀನಾಮೆ ಕೊಡುವುದಕ್ಕೆಂದು ನಾನು ಅದನ್ನು ಇಲ್ಲಿಗೆ ಬರೆದುಕೊಂಡು ಬಂದಿದ್ದೇನೆ. ಈ ಬಗ್ಗೆ ಒಂದು ಉತ್ತಮವಾದಂತಹ ತನಿಖೆ ಮಾಡಿಸಬೇಕು. ಸದನ ಸಮಿತಿಯನ್ನು ಬೇಕಾದರೆ ಕಳುಹಿಸಿ ಅಥವಾ ಬೇರೆ ಯಾರನ್ನಾದರೂ ಕಳುಹಿಸಿ. ಮಾನ್ಯ ಸಿಂದ್ಯಾರವರನ್ನಾದರೂ ಕಳುಹಿಸಿ ಅಥವಾ ಅಲ್ಲೇ ಓಡಾಡುವ ಮಾನ್ಯ ಕಾಗೋಡು ತಿಮ್ಮಪ್ಪನವರನ್ನು ಕಳುಹಿಸಿ. ಇತರ ಮಂತ್ರಿಗಳೂ ಸಹಾ ಅಲ್ಲೇ ಓಡಾಡುತ್ತಿದ್ದಾರೆ. ನೀವೇ ಬನ್ನಿ. ಅಲ್ಲಿ ಉದ್ಘಾಟನೆಯಾಗುವಂತಹ ಕಾಮಗಾರಿಗಳು ಆಗಿಲ್ಲ. ತಾವೇ ಭಾನುವಾರ ಬಂದು ನೋಡಿ. ಇದೇನಾದರೂ ಸುಳ್ಳಾದರೆ ನಾನು ಅಲ್ಲೇ ರಾಜೀನಾಮೆ ಕೊಡುತ್ತೇನೆ. ಬೇಕಾದರೆ ಇದನ್ನು ಇಲ್ಲೇ ಕೊಟ್ಟು ಹೋಗಿರುತ್ತೇನೆ.

ಅಧ್ಯಕ್ಷರು:- ಮಾನ್ಯ ಸಚಿವರು ಏನಾದರೂ ಉತ್ತರ ಹೇಳುವುದಿದೆಯೇ?

ಶ್ರೀ ಧರ್ಮಸಿಂಗ್(ಲೋಕೋಪಯೋಗಿ ಸಚಿವರು):- ಮಾನ್ಯ ಅಧ್ಯಕ್ಷರೇ, ಮಾನ್ಯ ನೀಲಕಂಠಪ್ಪನವರು ಈ ವಿಷಯವನ್ನು ನನ್ನ ಗಮನಕ್ಕೆ ತಂದಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಗೂ ಕೂಡ ಹೋಗಿ ಹೇಳಿದಮೇಲೆ, ಮಾನ್ಯ ಮುಖ್ಯಮಂತ್ರಿಗಳೂ ಕೂಡ ಅದರ ಬಗ್ಗೆ ತನಿಖೆಯಾಗಬೇಕು ಎನ್ನತಕ್ಕಂಥ ಆದೇಶವನ್ನು ಕೊಟ್ಟಿದ್ದಾರೆ. ಒಟ್ಟಿನಲ್ಲಿ ಇಲ್ಲಿಯವರೆಗೆ ಆ 3 ಕಿ.ಮೀ. ರೋಡ್‌ನಲ್ಲಿ 25 ಗುಂಡಿಗಲು ಬಿದ್ದಿದೆ. ಇನ್ನು ಟೆಂಡರ್ ಕಾಲ್‌ಫಾರ್ ಮಾಡಿ ಕೊಟ್ಟಂತಹ ಕೆಲಸ. ಇದನ್ನು ನಾವು ಕೊಟ್ಟಿಲ್ಲ. ನ್ಯಾಷನಲ್ ಹೈವೇ ಅಥಾರಿಟಿಯವರು ಇದನ್ನು ಕೊಟ್ಟಿದ್ದಾರೆ. ಅದರಲ್ಲಿ he

is one of the best contractors. ನನಗೇನೂ ಕಾಂಪ್ಲಿಮೆಂಟ್ ಕೊಡತಕ್ಕಂಥದ್ದು ಅಲ್ಲ, ನಾನು ಆ ಕಾಂಟ್ರಾಕ್ಟರ್ ಅನ್ನೂ ನೋಡಿಯೂ ಇಲ್ಲ. ಆದರೆ ಕೆಲವು ಕಡೆ ಥಿಕ್‌ನೆಸ್‌ನಲ್ಲಿ ಏನೋ ಸ್ವಲ್ಪ ಅಂತರ ಬಂದಿದೆ. ಇವತ್ತು 70 ಜನ quality of control division's people have visited that place. ಮೊನ್ನೆ ಹೇಳಿದ ಹಾಗೆ ನಾವು ಕರ್ನಾಟಕ ರಾಜ್ಯದಲ್ಲಿ ಕೇವಲ ಇಂಡಿನಿಯರ್‌ಗಳ ರಿಪೋರ್ಟ್ ಮೇಲೆ ಆಧಾರ ಇಟ್ಟುಕೊಂಡು ಕೆಲಸ ಮಾಡತಕ್ಕಂಥಾದ್ದು ಅಲ್ಲ. ಮಾನ್ಯ ಸಿಂಧ್ಯರವರು ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ ನಾನು ಈ ಮಾತನ್ನು ಹೇಳಿದ್ದೆ. ಕೇರಳದಲ್ಲಿ people action committee ಎಂದು ಆಗಿದೆ. ಯಾವುದಾದರೂ ಕೆಲಸ ಆಗಬೇಕಾದರೆ, they have to certify. ಇವತ್ತು ಅಷ್ಟು ಬಹಳ ರ‍್ಯಾಡಿಕಲ್ಲಾಗಿ ಕರ್ನಾಟಕದಲ್ಲಿ ಬೇಡ ಎಂದು ಹೇಳಿ ನಾನು ಪ್ರೋಜಟ್ಟು ಮತ್ತು ವೀರ ರಾಘವನ್ ಎಂಬ ಇಬ್ಬರು ಎಕ್ಸ್‌ಪರ್ಟ್‌ಗಳನ್ನೂ ಕೂಡ ಅಲ್ಲಿಗೆ ಕಳುಹಿಸಿದ್ದೇನೆ. ಇವತ್ತು ಎಲ್ಲಿ ಸ್ವಲ್ಪ ಹಾಳಾಗಿದೆಯೋ ಅಲ್ಲಿಗೆ ಅವರೇ ಖುದ್ದಾಗಿ ಹೋಗಿದ್ದಾರೆ. ಇಂಜಿನಿಯರ್ ನಾಗರಾಜಯ್ಯನವರು ಜೊತೆಗೆ ಹೋಗಿದ್ದಾರೆ. ಬೇರೆಯವರು ಹೋದಾಗ ನಾನು ಬೇರೆ ಕಡೆಗೆ ಇದ್ದೆ. ಖುದ್ದಾಗಿ ಮಾನ್ಯ ನೀಲಕಂಠಪ್ಪನವರೂ ಕೂಡ ಹೋಗಿ ಅಲ್ಲಿ ಇನ್ಸ್‌ಪೆಕ್ಟ್ ಮಾಡಿದ್ದಾರೆ. ಮಾನ್ಯ ನೀಲಕಂಠಪ್ಪನವರಿಗೆ ನಾನು ಮನವಿ ಮಾಡಿಕೊಳ್ಳುವುದೇನೆಂದರೆ, ಅವರು ಖಂಡೂರ್‌ರವರಿಗೂ ಕೂಡ ದೂರನ್ನು ಕಳುಹಿಸಿ ಬಿಟ್ಟಿದ್ದಾರೆ. ನಾನು ಕೇವಲ ಅಧಿಕಾರಿಗಳ ಮೇಲೆ ಹೆಚ್ಚು ಭರವಸೆ ಇಟ್ಟಿರುತ್ತೇನೆ ಎಂದಲ್ಲ. ಮಾನ್ಯ ನೀಲಕಂಠಪ್ಪನವರು ಈ ಸದನದ ಹಿರಿಯ ಸದಸ್ಯರಾಗಿದ್ದಾರೆ. ತಮ್ಮ ಮೇಲೆ ಕೂಡ ನಮಗೆ ಬಹಳ ಅಭಿಮಾನ ಇದೆ. ಬೇಕಾದರೆ ಈ ಸೆಷನ್ ಕಳೆದಮೇಲೆ ನಾವು ಮತ್ತು ನೀವೂ ಇಬ್ಬರೂ ಅಲ್ಲಿಗೆ ಹೋಗೋಣ. ಇವತ್ತು ಶಿಕಾರಿಪುರದಲ್ಲೂ ಕೂಡ ಇದೇ ರೀತಿಯಾಗಿ ಆಗಿತ್ತು. ನಾನು ಅಲ್ಲಿಗೆ ಮಾನ್ಯ ಯಡಿಯೂರಪ್ಪನವರನ್ನು ಕರೆದುಕೊಂಡು ಹೋಗಿದ್ದೆ. ನಾನು ಮತ್ತು ಮಾನ್ಯ ಕಾಗೋಡು ತಿಮ್ಮಪ್ಪನವರು ಕೂಡಿ ಅಲ್ಲಿಗೆ ಹೋಗಿದ್ದೆವು. ಬೇಕಾದರೆ ನಾನು ಕೂಡ ಮತ್ತೆ ಖುದ್ದಾಗಿ ನಿಮ್ಮ ಜೊತೆಗೆ ಬರುತ್ತೇನೆ. ಕಳಪೆ ಕೆಲಸ ಆಗತಕ್ಕದ್ದನ್ನು ನಾವು ಸಹನೆ ಮಾಡತಕ್ಕವರು ಅಲ್ಲ. ಅದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ. ಒಂದು ವರ್ಷದವರೆಗೆ ಎಲ್ಲಿ ಕೆಲಸ ಕೆಟ್ಟಿದೆಯೋ ಅದನ್ನು ಮತ್ತೆ ಮಾಡಿಸತಕ್ಕಂಥ ಅವಕಾಶ ಇನ್ನೂ ಕೂಡ ಇದೆ. ಅದಕ್ಕೆ ಇನ್ನೂ ಕೂಡ ಟೈಮ್ ಇದೆ. ಅವನ 23 ಲಕ್ಷ ರೂಪಾಯಿಗಳು ಕೂಡ ನಮ್ಮಲ್ಲಿ ಡಿಪಾಸಿಟ್ ಇದೆ. ಇಲ್ಲಿ ಯಾರಿಗೂ ಕೂಡ ರಿಯಾಯಿತಿ ಮಾಡತಕ್ಕದ್ದು ಇಲ್ಲ. ಮಾನ್ಯ ಶಾಸಕರು ಏನು ಹೇಳುತ್ತಾರೋ ಅದರಮೇಲೆ ನನಗೆ ನಂಬಿಕೆ ಇದೆ. ಮಾನ್ಯ ಶಾಸಕರೂ ಕೂಡ ಸಾರ್ವಜನಿಕರ ಹಿತದೃಷ್ಟಿಯಿಂದ ಇದನ್ನು ನಮ್ಮ ಗಮನಕ್ಕೆ ತಂದಿದ್ದೀರಿ. ಇನ್ನೂ ಕೂಡ ಬೇಕಾದರೆ, ಸೆಷನ್ ಮುಗಿದ ನಂತರ ಖುದ್ದಾಗಿ ನಾವು ಮತ್ತು ನೀವು ಹೋಗಿ ನೋಡಿದ ಮೇಲೆ ಅದನ್ನು ಸರಿಪಡಿಸತಕ್ಕ ಕೆಲಸವನ್ನು ನಾನು ಮಾಡುತ್ತೇನೆ.

ಶ್ರೀ ಬಿ.ಆರ್. ನೀಲಕಂಠಪ್ಪ:- ಮಾನ್ಯ ಅಧ್ಯಕ್ಷರೇ, ...

ಅಧ್ಯಕ್ಷರು:- ಮಾನ್ಯ ನೀಲಕಂಠಪ್ಪನವರೇ, ತಮ್ಮ ಪ್ರಾಬ್ಲಮ್ ಸಾಲ್ವ್ ಆಯಿತು ಬಿಡಿ. ಈಗ ಮಾನ್ಯ ಮಹಾದೇವ ಪ್ರಸಾದ್‌ರವರು ಮಾತನಾಡಿ.

ಶ್ರೀ ಬಿ.ಆರ್. ನೀಲಕಂಠಪ್ಪ:- .... ಅಲ್ಲಿ ಇವತ್ತು ಕಂಪ್ಲೀಟ್ ಆಗಿ ಗುಂಡಿ ಬಿದ್ದಿದೆ. 2 ಕಿ.ಮೀ. ರಸ್ತೆ ಮಾತ್ರ ಅಲ್ಲಿ ಚೆನ್ನಾಗಿದೆ. ಇನ್ನುಳಿದ 13 ಕಿ.ಮೀ. ರಸ್ತೆ ಅಲ್ಲಿ ಹಾಳಾಗಿದೆ.

ದಯಮಾಡಿ ಮಾನ್ಯ ಸಚಿವರು ಒಂದು ದಿವಸ ಅಲ್ಲಿಗೆ ಬಂದು ನೋಡಲಿ. ನಾನು ಹೇಳುವುದರಲ್ಲಿ ಸತ್ಯತೆ ಇದ್ದರೆ, ಮಾನ್ಯ ಸಚಿವರು ಸಂಬಂಧಪಟ್ಟ ಅಧಿಕಾರಿಗಳನ್ನು ಸೆವೆಯಿಂದ ಖಾಯಂ ಆಗಿ ನಿವೃತ್ತಿಗೊಳಿಸಬೇಕು. ಇಲ್ಲದಿದ್ದರೆ ನನ್ನನ್ನಾದರೂ ರಾಜಕೀಯದಿಂದ ಖಾಯಂ ಆಗಿ ನಿವೃತ್ತಿಗೊಳಿಸಬೇಕು, ಅದನ್ನು ನಾನು ಒಪ್ಪಿಕೊಳ್ಳಲಿಕ್ಕೆ ತಯಾರಿದ್ದೇನೆ. ನಾನು ಸತ್ಯ ಹೇಳುತ್ತಿದ್ದೇನೆ. ಮಾನ್ಯ ಸಚಿವರು ದಯವಿಟ್ಟು ಬರಬೇಕು.

ಶ್ರೀ ಧರ್ಮಸಿಂಗ್:- ನಾವು ಮತ್ತು ನೀವೂ ಇಬ್ಬರೂ ಖುದ್ದಾಗಿ ಅಲ್ಲಿಗೆ ಹೋಗಿ ಕ್ರಮ ತೆಗೆದುಕೊಳ್ಳೋಣ.

(ಈ) ಮೈಸೂರಿನಲ್ಲಿ ಮರಿಮಲ್ಲಪ್ಪ ವಿದ್ಯಾಸಂಸ್ಥೆಯ ಆಡಳಿತ ವೈಖರಿ ಕುರಿತು.

ಶ್ರೀ ಹೆಚ್.ಎಸ್. ಮಹಾದೇವ ಪ್ರಸಾದ್ (ಗುಂಡ್ಲುಪೇಟೆ):- ಮಾನ್ಯ ಅಧ್ಯಕ್ಷರೇ, ಮೈಸೂರಿನಲ್ಲಿ ಇರತಕ್ಕಂಥ ಮರಿಮಲ್ಲಪ್ಪ ವಿದ್ಯಾ ಸಂಸ್ಥೆ ರ್ಯಾಂಕುಗಳ ಕಣಜವೆಂದು ಹೆಸರು ಪಡೆದಿದೆ. ಸುಮಾರು ವರ್ಷಗಳಿಂದ ಪಿ.ಯು.ಸಿ. ಮತ್ತು ಎಸ್.ಎಸ್.ಎಲ್.ಸಿ.ಯಲ್ಲಿ ಸಾಕಷ್ಟು ರ್ಯಾಂಕ್‌ಗಳನ್ನು ಆ ಕಾಲೇಜ್ ಪಡೆದಿದೆ. ಅದಕ್ಕಾಗಿ ರಾಜ್ಯದ ಮೂಲೆ ಮೂಲೆಗಳಿಂದ ಆ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಬೇಕೆಂದು ಪೋಷಕರು ವಿದ್ಯಾರ್ಥಿಗಳನ್ನು ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತಿರುವುದು ಎಲ್ಲರಿಗೂ ಗೊತ್ತಿರತಕ್ಕಥ ವಿಚಾರವೇ ಆಗಿದೆ. ಇಂತಹ ಒಂದು ಸಂಸ್ಥೆಯಲ್ಲಿ ಇತ್ತೀಚೆಗೆ ಹಿಂದೆ ಅಲ್ಲಿಯ ಗೌರವ ಕಾರ್ಯದರ್ಶಿ ಮತ್ತು ಕಾರ್ಯನಿರ್ವಾಹಕ ಅಧ್ಯಕ್ಷರಾಗಿದ್ದಂತಹ ಶಿವಲಿಂಗಯ್ಯನವರು ನಿಧನರಾದ ಮೇಲೆ 1999ರಿಂದ ಅಲ್ಲಿಯ ಆಡಳಿತ ಮಂಡಳಿಯಲ್ಲಿ ಅನೇಕ ನ್ಯೂನತೆಗಳು ಉಂಟಾಗಿ, ಇವತ್ತು ಸಂಸ್ಥೆಯ ಆಡಳಿತ ವೈಖರಿ ಒಂದು ಗೊಂದಲದ ಗೂಡಾಗಿದೆ. ಅದರಲ್ಲಿ ಮಲ್ಲಮ್ಮ ಮರಿಮಲ್ಲಪ್ಪ ಮಹಿಳಾ ಕಾಲೇಜ್‌ನಲ್ಲಿ ಕಳೆದ 15 ವರ್ಷಗಳಿಂದ ಪ್ರಾಚಾರ್ಯರಾಗಿ ಕೆಲಸ ನಿರ್ವಹಿಸಿರತಕ್ಕಂತಹ ಡಾ।। ಜೆ.ಎಸ್. ರತ್ನಮ್ಮನವರು ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್, ಸೆನೆಟ್ ಹಾಗೂ ಅಕಾಡೆಮಿಕ್ ಕೌನ್ಸಿಲ್ ಸದಸ್ಯರಾಗಿ ಸೇವೆ ಸಲ್ಲಿಸಿದ್ದು ಈ ಕಾಲೇಜಿನ ಉನ್ನತಿಗಾಗಿ ಅವರೂ ಕೂಡ ಸಾಕಷ್ಟು ಕಾರಣಕರ್ತರಾಗಿದ್ದಾರೆ. ಇಂತಹವರ ಮೇಲೆ 1999ರಲ್ಲಿ ಅಲ್ಲಿಯ ರಾಜ್ಯಶಾಸ್ತ್ರದ ಉಪನ್ಯಾಸಕರಾಗಿದ್ದ ಕೆ.ಎನ್ ಪಂಚಾಕ್ಷರಿಸ್ವಾಮಿಯವರು ಮರಿಮಲ್ಲಪ್ಪ ಆಡಳಿತ ಮಂಡಳಿಗೆ ಗೌರವ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದಾರೆ. ಇವರು ಯಾವುದೇ ಅಕಾಡೆಮಿಕ್ ಹೆಡ್ ಆಗದೇ ಇದ್ದರೂ ಕೂಡ ಇವರನ್ನು ಅಲ್ಲಿಯ ಗೌರವ ಕಾರ್ಯದರ್ಶಿ ಮತ್ತು ಟ್ರಸ್ಟ್ ಆಗಿ ನೇಮಕ ಮಾಡಿರತಕ್ಕಂಥಾದ್ದು ಕಾನೂನು ಬಾಹಿರವಾಗಿದೆ. ಇವರನ್ನು ನೇಮಕ ಮಾಡಿಕೊಳ್ಳುವುದು ಸೂಕ್ತ ಅಲ್ಲವೆಂದು ಹೇಳಿ ಟ್ರಸ್ಟಿ ಆಗಿದ್ದಂತಹ ಡಾ।। ರತ್ನಮ್ಮನವರು ಆಡಳಿತ ಮಂಡಲಿಯವರಲ್ಲಿ ಪ್ರಸ್ತಾಪ ಮಾಡಿದ್ದರಿಂದ ಅಂದಿನಿಂದ ಅವರಿಗೆ ಸತತವಾಗಿ ಕಿರುಕುಳವನ್ನು ಆಡಳಿತ ಮಂಡಳಿಯವರು ನೀಡುತ್ತಾ ಬಂದಿದ್ದಾರೆ ಮತ್ತು ಇಲ್ಲಸಲ್ಲದ ಆರೋಪಗಳನ್ನು ಡಾ।। ರತ್ನಮ್ಮನವರ ಮೇಲೆ ಹೊರಿಸಿ ಅವರಿಗೆ ಕಿರುಕುಳ ನೀಡುತ್ತಿದ್ದಾರೆ. ಅವರು ರಜ ಹೋದ ಅವಧಿಯಲ್ಲಿ ಆಡಳಿತ ಮಂಡಳಿ ಇವರ ಬಗ್ಗೆ ಎತ್ತಿದ ಆರೋಪಗಳಿಗೆ ಯಾವುದೇ ಪ್ರಾಥಮಿಕ ವಿಚಾರಣೆ ಮಾಡದೆ ಶ್ರೀಮತಿ ರತ್ನಮ್ಮನವರಿಗೆ ಅಮಾನತ್ತಿನಲ್ಲಿಡಲು ನಿರ್ಣಯಿಸಿ, ಈಗ 10 ತಿಂಗಳ ಕಾಲದಲ್ಲಿ ಅವರಿಗೆ ಅಮಾನತ್ತಿನಲ್ಲಿಟ್ಟು ಇದುವರೆಗೆ ಅದನ್ನು ತೆರವುಗೊಳಿಸಿಲ್ಲ. ಅವರನ್ನು ಅಮಾನತ್ತಿನಲ್ಲಿಡುವುದರ ಬಗ್ಗೆ ಕಾಲೇಜು ಶಿಕ್ಷಣ ಇಲಾಖೆಯಿಂದ ಯಾವುದೇ ಅನುಮತಿ ಕೂಡ ಅವರು ಪಡೆದಿರುವುದಿಲ್ಲ. ಈ ರೀತಿಯಲ್ಲಿ